**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹುಣಸೂರು**

ದಿನಾಂಕಃ 06 ನೇ ಜುಲೈ ತಿಂಗಳು 2026ರಂದು

**ಸಿಸಿ ನಂ.189/2026**

**ಫಿರ್ಯಾದುದಾರರುಃ** ಸರಕಾರ (ಹುಣಸೂರು ಪಟ್ಟಣ ಪೊಲೀಸರಿಂದ)

- ವಿರುದ್ಧ -

**ಆರೋಪಿಃ** ಫೈರೋಜ್ ಖಾನ್., ಬಿನ್ ಆದಂ ಖಾನ್, 35 ವರ್ಷ,
ವಾಸಃ ಅಹಮದ್ ನಗರ, ಹನಗೋಡು ಹೋಬಳಿ,
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

**ದೋಷಾರೋಪಣೆ**

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆಃ

ದಿನಾಂಕಃ 02.01.2026ರಂದು ರಾತ್ರಿ 8.15 ಗಂಟೆ ಸಮಯದಲ್ಲಿ ಹುಣಸೂರು ಪಟ್ಟಣ ಪೊಲೀಸ್ ಠಾಣಾ ಸರಹದ್ದು ಹುಣಸೂರು ತಾಲ್ಲೂಕು ಕಛೇರಿಯ ಮುಂಭಾಗ ಹಾದು ಹೋಗಿರುವ ಮೈಸೂರು - ಮಡಿಕೇರಿ ಮುಖ್ಯ ರಸ್ತೆಯ ಬಳಿ ಚಾಸಾ.2ಸೈಯದ್ ಸಾದತ್ ರವರು ರಸ್ತೆಯ ಅಂಚಿನಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಅದೇ ಸಮಯಕ್ಕೆ ಪಿರಿಯಾಪಟ್ಟಣದ ಕಡೆಯಿಂದ ಮೈಸೂರು ಕಡೆಗೆ ಆರೋಪಿಯಾದ ನೀವು ಕೆಎ-09/ಜೆಕ್ಯೂ-6048 ಟಿ ವಿ ಎಸ್ NTORQ Scooty ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು, ಆದುದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ 281 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ವಿವರಿಸಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಅಂಚಿನಲ್ಲಿ

ನಡೆದುಕೊಂಡು ಹೋಗುತ್ತಿದ್ದ ಚಾಸಾ.2ರವರಿಗೆ ಡಿಕ್ಕಿ ಮಾಡಿದ ಪರಿಣಾಮ ಚಾಸಾ.2ರವರ ಬಲಕೈನ ಬಳಿ ತೀವ್ರ ಸ್ವರೂಪದ ಗಾಯಪಡಿಸಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು, ಆದುದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.125(ಬಿ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಾಣಿಸಿದ ಆರೋಪಣೆಯ ಬಗ್ಗೆ ನಿಮ್ಮನ್ನು ಈ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಪಡಿಸುತ್ತೇನೆ ಎಂದು ಈ ಮೂಲಕ ಆಜ್ಞೆ ಮಾಡುತ್ತಿದ್ದೇನೆ.

Sd/-

(ಅನಿತ)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ಹುಣಸೂರು.**

ANITHA Digitally signed by ANITHA
Date: 2026.07.06 17:55:12 +0530

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹುಣಸೂರು.**

**ಸಿಸಿ ನಂ.189/2026**

ಆಪಾದಿತನ ಹೆಸರು : ಫೈರೋಜ್ ಖಾನ್.,
ತಂದೆಯ ಹೆಸರು : ಆದಂ ಖಾನ್,
ವಯಸ್ಸು : 35 ವರ್ಷ,
ವಾಸ : ಅಹಮದ್ ನಗರ, ಹನಗೋಡು ಹೋಬಳಿ,
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ. .,

**ಭಾರತೀಯ ನಾಗರೀಕಾ ಸುರಕ್ಷಾ ಸಂಹಿತೆಯ ಕಲಂ 234ರ ಅಡಿ ಆರೋಪಿಯ ಹೇಳಿಕೆ**

| | |
|---|---|
| ಪ್ರಶ್ನೆ 1 : | ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ? |
| ಉತ್ತರಃ | ತಿಳಿಯಿತು |
| ಪ್ರಶ್ನೆ 2 : | ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ? |
| ಉತ್ತರಃ | ತಪ್ಪು ಒಪ್ಪಿಕೊಳ್ಳುತ್ತೇನೆ |

ಮೇಲ್ಕಾಣಿಸಿದ ಹೇಳಿಕೆಯನ್ನು ದಿನಾಂಕಃ 06.07.2026 ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು, ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

ANITHA Digitally signed by ANITHA Date: 2026.07.06 17:55:18 +0530

Sd/-
(ಅನಿತ)
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂ., ಹುಣಸೂರು.**